**ತಿಳಿಯುತ್ತದೆ. ಹದಿನಾರು ವರ್ಷಕ್ಕೇ ನೀವು ಕೆಲಸ ಮಾಡಲು ತೊಡಗಿದಿರಿ. ಶಾಲಾಮಕ್ಕಳಿಗೆ ಗಣಿತ ಹೇಳಿಕೊಡಲು ತೊಡಗಿದಿರಿ. ಈ ಕಠಿಣ ಬದುಕು ನಿಮ್ಮನ್ನು ಲೇಖಕನಾಗಿ ರೂಪಿಸುವುದರಲ್ಲಿ ಯಾವ ಪಾತ್ರ ವಹಿಸಿದೆ?**

ಆ ಕಠಿಣ ಬಾಲ್ಯ ನನಗೆ ಕೊಟ್ಟ ದೊಡ್ಡ ಉಡುಗೊರೆ ಎಂದರೆ ಕೃತಜ್ಞತಾ ಭಾವ. ಏಪ್ರಿಲ್ ತಿಂಗಳ ಬೆಳಿಗ್ಗೆ ಎದ್ದಾಗ, ಈವತ್ತಿನ ICSE ಗಣಿತ ಪ್ರಶ್ನೆಪತ್ರಿಕೆ ಏನು ಅಂತ ಈಗ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಇಲ್ಲವಾದರೆ, ಶಾಲೆಯ ಹೊರಗೆ ಕಾಯುತ್ತಿದ್ದು, ಯಾರಾದರೂ ವಿದ್ಯಾರ್ಥಿ ಹೊರಗೆ ಬಂದ ತಕ್ಷಣ ಅವನ ಮೂಲಕ ಪ್ರಶ್ನೆಪತ್ರಿಕೆ ಪಡೆದು, ಏನೆಲ್ಲಾ ಪ್ರಶ್ನೆಗಳಿಗೆ ನನ್ನ ವಿದ್ಯಾರ್ಥಿಗಳು ಉತ್ತರ ಬರೆದಿರಬಹುದು, ಯಾವುದು ಕಷ್ಟವಾಗಿರಬಹುದು ಅಂತೆಲ್ಲಾ ಯೋಚಿಸುತ್ತಿದ್ದೆ. ಬೋಧನೆ ಎಂದರೆ ಕೇವಲ ಜ್ಞಾನ ಪ್ರಸರಣವಲ್ಲ. ಮಕ್ಕಳ ಜೊತೆ ಒಂದು ಬಗೆಯ ಸಂಬಂಧ ಬೆಳೆಸಿಕೊಳ್ಳದೆ 50-60 ಗಂಟೆಗಳ ಕಾಲ ಅವರೊಡನೆ ಕಳೆಯುವುದು ಸಾಧ್ಯವಿಲ್ಲ. ಕೆಲವೊಮ್ಮೆಯಂತೂ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ನನ್ನ ಮನಸಿನಲ್ಲಿ ಇಡುಕಿರಿದಿರುತ್ತಿದ್ದರು. ಕುನಾಲ್ ಇತಿಹಾಸದ ಪರೀಕ್ಷೆಯಲ್ಲಿ ಮುಗ್ಗರಿಸಿದನಾ, ಭಾರತಿ ಧಾರ್ಮಿಕ ಬೋಧನೆಯ ಶಾಲೆ ಮುಗಿಸಿ ಸರಿಯಾದ ಸಮಯಕ್ಕೆ ನನ್ನ ಗಣಿತ ತರಗತಿಗೆ ಬರುತ್ತಾಳಾ, ಇಶಾನ್‌ನ ಖಿನ್ನತೆ ಕಡಿಮೆಯಾಗಿದೆಯಾ – ಹೀಗೆಲ್ಲಾ ಯೋಚನೆಗಳು. ಅವುಗಳ ನಿರ್ವಹಣೆಗೆ ನಾನು ಸಾಕಷ್ಟು ಶಕ್ತಿಯನ್ನು ವ್ಯಯಿಸುತ್ತಿದ್ದೆ. ಆದ್ದರಿಂದ ನನ್ನ ಸೃಜನಶೀಲ ಬರವಣಿಗೆಗೆ ಸಮಯ ಸಿಗುತ್ತಿರಲಿಲ್ಲ. ಶಾಲೆಯವರು ನನ್ನ ಬದುಕಿನ ನಿರ್ವಹಣೆಗೆ ಸಂಬಳವನ್ನು ಕೊಡುತ್ತಿದ್ದರಾದ್ದರಿಂದ ಈ ಜವಾಬ್ದಾರಿಗಳಿಂದ ಕಳಚಿಕೊಳ್ಳುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಈಗಲೂ ಒಮ್ಮೊಮ್ಮೆ ನನ್ನ ಬರವಣಿಗೆ ಕೈಜಾರಿ ಹೋಗುವಾಗ, ನಾನು ಮತ್ತೆ ಮತ್ತೆ ಆ ದಿನಗಳನ್ನು ನೆನಪಿಸಿಕೊಳ್ಳುತ್ತೇನೆ. ಹೇಗೋ ಸಮಯ ಹೊಂದಿಸಿಕೊಂಡು ಬರೆಯುತ್ತಿದ್ದೆ. ಕೆಲವೊಮ್ಮೆಯಂತೂ ಚಲಿಸುವ ಬಸ್ಸಿನಲ್ಲಿ ಕುಳಿತು ಕವಿತೆ ಬರೆಯುತ್ತಿದ್ದೆ. ಈಗ ಅವೆಲ್ಲಾ ಮಾಡುವ ಅವಶ್ಯಕತೆ ಇಲ್ಲವೆಂದು ನನ್ನಲ್ಲಿ ಕೃತಜ್ಞತಾ ಭಾವ ತುಂಬಿಕೊಂಡಿದೆ. ಈಗಲೂ ಎಷ್ಟೋ ಜನಕ್ಕೆ ನನ್ನಂತೆ ಸುಲಭವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಬದುಕು ಬಿಡುವುದಿಲ್ಲ ಎಂಬ ಅರಿವು ನನಗಿದೆ. ಬಹುತೇಕರು ಬೆಳಗಿನ ಶಿಫ್ಟ್ ಕೆಲಸ ಮಾಡಿ, ರಾತ್ರಿ ಬರೆಯುತ್ತಾರೆ. ಲೇಖಕರಿಗೆ ಬೆಳಗಿನ ಶಿಫ್ಟ್ ಒಳ್ಳೆಯದು. ಒಂದು ರೀತಿಯ ಯಾಂತ್ರಿಕತೆಯಲ್ಲಿ ಮಾಡಿ ಮುಗಿಸುವ ಕೆಲಸವನ್ನು ಆಯ್ದುಕೊಂಡರೆ ಒಳ್ಳೆಯದು. ಪಟ ಪಟ ಅಂತ ದೇಹವೇ ಮಾಡಿಬಿಡುವಂತಹ ಕೆಲಸವನ್ನು ಆಯ್ದುಕೊಂಡು, ಮನಸ್ಸನ್ನು ನಮ್ಮ ಕಲ್ಪನೆಯಲ್ಲಿ ತೇಲಿಬಿಡಲು ಸಾಧ್ಯವಾಗುವಂತೆ ಇರಬೇಕು. ಆದರೂ ಇದು ಹೇಳಿದಷ್ಟು ಸುಲಭವಲ್ಲ. ಆ ಯಾಂತ್ರಿಕ ಕೆಲಸದ ಮಧ್ಯೆಯೂ ಅನೇಕ ಅಡೆತಡೆಗಳು ಬರುತ್ತವೆ. ಯಾರೋ ಬರುತ್ತಾರೆ, ಏನೋ ಕೇಳುತ್ತಾರೆ... ಕಷ್ಟ. ನೀವು ಮಾಡುವ ದಿನದ ಕೆಲಸದಲ್ಲಿ ಶೇ. 80ರಷ್ಟು ಸಾಹಿತ್ಯದಲ್ಲಿ ತೊಡಗುವ ಅವಕಾಶ ನಿಮಗೆ ಸಿಕ್ಕರೆ, ನೀವು ಅದೃಷ್ಟವಂತರು.

**◆ ನೀವು ಸಂಪಾದನೆ ಮಾಡಿದ, ಮಾನಸಿಕವಾಗಿ ಅಸ್ವಸ್ಥರಾದ ಹಲವು ಲೇಖಕರ ಜವಾಬ್ದಾರಿ ನಿರ್ವಹಿಸಿದವರು ಬರೆದ ಲೇಖನಗಳ ಸಂಕಲನ 'The book of light' ಅನ್ನು ಗಮನಿಸಿದ್ದೇನೆ. ಅದು ನನ್ನನ್ನು ಸಾಕಷ್ಟು ತಲ್ಲಣಕ್ಕೆ ದೂಡಿದೆ. ಭಾರತದಲ್ಲಿ ಮಾನಸಿಕ ಆರೋಗ್ಯದ ತಿಳಿವು ತುಂಬಾ ಕಡಿಮೆ ಇದೆ. ವಿದ್ಯಾರ್ಥಿಗಳ ಮಾನಸಿಕ ಸ್ವಾಸ್ಥ್ಯದ ಕುರಿತು ನೀವು ಏನು ಹೇಳುತ್ತೀರಿ?**

ಮೊದಲಿಗೆ ನಾವೆಲ್ಲರೂ ನಮ್ಮ ಕುರಿತು ಸಹೃದಯರಾಗಿರುವುದನ್ನು ಕಲಿತುಕೊಳ್ಳಬೇಕು. ಪ್ರತಿದಿನವೂ ಯಂತ್ರದಂತೆ ಕೆಲಸ ಮಾಡುವ ಅದೇ ಪರಿಪೂರ್ಣ ವ್ಯಕ್ತಿ ನಾನಾಗಿರಬೇಕು ಎನ್ನುವ ಸಿದ್ಧಾಂತಕ್ಕೆ ನಾವೆಲ್ಲಾ ಬಲಿಯಾಗಿದ್ದೇವೆ. ಎಲ್ಲದರಲ್ಲೂ ನೂರು ಶತ ಯಶಸ್ವಿಗಳಾಗಿರಬೇಕು – ತಿಳಿವಳಿಕೆಯಲ್ಲಿ, ಕಾರ್ಯ ನಿರ್ವಹಿಸುವುದರಲ್ಲಿ, ಗ್ರಹಿಕೆಯಲ್ಲಿ, ಅಪ್ಪ-ಮಗ-ಅಮ್ಮನ ಪಾತ್ರ ಮಾಡುವಲ್ಲಿ! ಅದು ಎಲ್ಲಾ ಹೊತ್ತಿನಲ್ಲೂ ಸಾಧ್ಯವಿಲ್ಲ. ಹಾಗೆ ನಮ್ಮ ಬಗ್ಗೆ ಸಹೃದಯತೆಯನ್ನು ಬೆಳೆಸಿಕೊಂಡಾಗ, ನಮ್ಮ ಕುರಿತು ಜಾಗ್ರತೆಯಾಗಿರುವ ಸ್ವಭಾವವೂ ಬರುತ್ತದೆ. ಎಲ್ಲಿಯೋ ಒಂದೆಡೆ ಗೆರೆ ಎಳೆಯುವುದು ನಿಮಗೆ ಗೊತ್ತಿರಬೇಕು. ಇತ್ತೀಚೆಗೆ ಶಿಕ್ಷಕರಾಗಿರುವ ನನ್ನ